ಇಷ್ಟು ಗಂಭೀರವೇ ನನ್ನ ಸಮಸ್ಯೆ? ಎಂದನ್ನಿಸಿದರೂ, ಏನು ಆಗಲ್ಲ ಇದನ್ನೂ ಖುಷಿಯಿಂದ ಅನುಭವಿಸೋಣ ಎಂದು ಧೈರ್ಯ ತಂದುಕೊಂಡೆ. ನೀರಿಗಿಳಿದ ಮೇಲೆ ಚಳಿಯೇನು? ಭಯವೇನು? ಎನ್ನುತ್ತಾ ಎಂಆರ್‌ಐ ಮೆಷಿನ್‌ಗೆ ತಲೆಕೊಡಲು ಸಿದ್ಧಳಾದೆ.

'ನೀವು ಒಳಗೆ ಹೋದ ಮೇಲೆ ಇಂಜೆಕ್ಷನ್ ಹಾಕುತ್ತೇವೆ, ಮೈಯೆಲ್ಲಾ ತಣ್ಣಗಾಗುತ್ತದೆ, ಗಾಬರಿಯಾಗಬೇಡಿ' ಎಂಬ ಸೂಚನೆ ಕೊಟ್ಟಿದ್ದರು. ಮೆಷಿನ್‌ನ ಒಳಹೊಕ್ಕ ಕೂಡಲೆ ವಿಚಿತ್ರ ಕರ್ಕಶ ಸದ್ದು 45 ನಿಮಿಷಗಳವರೆಗೆ ಇತ್ತು. ಭಗವಂತನ ಸ್ಮರಣೆ ಮಾಡುತ್ತಲೇ ಕರ್ಕಶವನ್ನು ಸಹಿಸಿಕೊಂಡೆ. ಮೊದಲೇ ಕೈಗೆ ಸ್ಕ್ವೀಜ್ ಬಾಲನ್ನು ಕೊಟ್ಟು 'ಏನಾದರು ಹೇಳಬೇಕೆನಿಸಿದರೆ ಇದನ್ನು ಒತ್ತಿ' ಎಂದಿದ್ದರು. ಎಷ್ಟೋ ಹೊತ್ತಿನ ನಂತರ ಕೈಗೆ ತಣ್ಣಗಿನ ದ್ರಾವಣವನ್ನು ಪುಶ್ ಮಾಡಿ ಮೈಕಲ್ಲಿ ಹೇಳಿದರು. ಒಮ್ಮೆಲೆ ಅದು ಸಂಪೂರ್ಣ ಶರೀರವನ್ನು ಆವರಿಸಿತು. ಶರೀರವೆಲ್ಲ ತಣ್ಣತಣ್ಣಗಾಯಿತು. ಇದರ ಜೊತೆಗೆ ವಿಚಿತ್ರ ಸದ್ದು ಇದರಿಂದ ಹೊರಹೋದರೆ ಸಾಕು ಎನಿಸುತ್ತಿತ್ತು. ಗಂಡ, ಮಕ್ಕಳು, ಅಪ್ಪ, ಅಮ್ಮ, ತಮ್ಮಂದಿರು, ಹಿತೈಷಿಗಳು, ಸ್ನೇಹಿತರು ನೆನಪಾದರು.

'ಇದನ್ನೆಲ್ಲಾ ಸಹಿಸಿದರೆ ಅಲ್ವೇ ಮತ್ತೆ ಅವರೊಂದಿಗೆ ಚೆನ್ನಾಗಿರಲು ಸಾಧ್ಯ' ಎಂದು ಧೈರ್ಯ ತಂದುಕೊಂಡೆ. ಬಹಳ ಹೊತ್ತಿನ ನಂತರ ಆಚೆ ಬಂದಾಗ ದೈಹಿಕ ಮಾನಸಿಕ ಬಳಲಿಕೆಯೂ ಇತ್ತು. ಅಲ್ಲಿಯ ಸಿಬ್ಬಂದಿಗಳ ಮೃದು ಸ್ಪರ್ಶದಲ್ಲಿ 'ಎಲ್ಲಾ ಗೆಲ್ಲುವಿರಿ' ಎನ್ನುವ ಮೂಕ ಸಂದೇಶವಿತ್ತು. ದುಃಖ ಇಮ್ಮಡಿಯಾಗುತ್ತಿತ್ತು. ಆದರೇನು ಮಾಡಬಲ್ಲೆ? ಎಂದು ಮೌನವಾಗಿದ್ದೆ.

ರೂಮಿಗೆ ಬಂದು ಕುಳಿತುಕೊಳ್ಳುವಷ್ಟರಲ್ಲಿ 'ಇನ್ನೂ ಒಂದು ಎಂಆರ್‌ಐ ಇದೆ ಬನ್ನಿ' ಎಂದರು ಬಹುಶಃ ಇನ್ನೊಮ್ಮೆ ಎಂಆರ್‌ಐಗೆ ಹೋಗಬೇಕಾದಾಗ 'ನಾನು ಬರಲಾರೆ ಎಂದರೆ ಇವರು ಬಿಡಲಾರರು. ನಾಳೆಯೇ ಮಹೂರ್ತ ಫಿಕ್ಸ್ ಆಗಿದೆ ಆದದ್ದಾಗಲಿ. ಗಾಲಿಕುರ್ಚಿಯಲ್ಲಿ ಕುಳಿತು ಲಿಫ್ಟ್ ಏರುವ ಭಾಗ್ಯ ಎಷ್ಟು ಜನರಿಗೆ ಇರುತ್ತೇ? ಒಳ್ಳೆ ಛಾನ್ಸ್' ಎಂದುಕೊಂಡು ಅದಕ್ಕೂ ಹೊರಟೆ. ನ್ಯೂರೊಸರ್ಜರಿ ಡಿಪಾರ್ಟ್‌ಮೆಂಟಿನ ಡಾಕ್ಟರ್ ಮುರಳಿಕೃಷ್ಣ ಬಂದು 'ಆಪರೇಷನ್ ಕನಿಷ್ಠ ನಾಲ್ಕು ಗಂಟೆ ಆಗಬಹುದು. ಅಗತ್ಯ ಬಿದ್ದರೆ ಒಂದು ದಿನವೂ ಆಗಬಹುದು' ಎಂದು ವಿವರಿಸುತ್ತಿದ್ದರು. ಗಾಬರಿಯಾದ ನನ್ನನ್ನು ನೋಡಿ ಮತ್ತೆ 'ಚಿಂತಿಸಬೇಡಿ ನಾವಿದ್ದೇವೆ, ಎಲ್ಲರೂ ಇದ್ದೇವೆ. ಡೋಂಟ್ ವರಿ ಮೇಡಮ್, ಹೇರ್ ತೆಗೆದು ಹೇರ್ ಇಡ್ತೇವೆ' ಎಂದು ಚಿನ್ಮುದ್ರೆಯ ರೀತಿ ತೋರಿಸಿದ್ದು ನನಗೆ ಭಯ ಮತ್ತು ಆತ್ಮವಿಶ್ವಾಸವನ್ನು ಒಟ್ಟಿಗೆ ತರಿಸಿದವು. ಇಷ್ಟೆಲ್ಲಾ ಕೇಳಿ ಮನೆಯವರ ಮುಖವನ್ನು ನೋಡುವ ಧೈರ್ಯ ಮಾಡಲಿಲ್ಲ.

'ರಾತ್ರಿ ಎಂಟರ ನಂತರ ಏನೂ ಸೇವಿಸಬಾರದು' ಎನ್ನುವ ಫರ್ಮಾನ್ ಇರುವ ಬೋರ್ಡ್ ತಂದು ನರ್ಸ್ ಇರಿಸಿದರು. ಫೋನ್ ತೆಗೆದುಕೊಂಡು ಅಮ್ಮನಿಗೆ ತಮ್ಮಂದಿರಿಗೆ ಕರೆ ಮಾಡಬೇಕು ಎನ್ನಿಸಿದರೂ ಕರೆ ಮಾಡಲಿಲ್ಲ. ಅಲ್ಲಿಯೇ ಇದ್ದ ನನ್ನ ಮನೆಯವರ ಫೋನಿಗೆ ಬಂದ ಕರೆಯ ಅಸಂಬದ್ಧ ಸಂಭಾಷಣೆ ಆ ನೋವಿನಲ್ಲೂ ನನ್ನನ್ನು ವಾದಕ್ಕೆಳೆಸಿತು.

'ಕಾಯಿಲೆ ಗುಣ ಮಾಡಿಕೊಳ್ಳುವುದಕ್ಕೆ ನಾವು ಬಂದಿರುವುದು' ಎನ್ನುವ ಮನೆಯವರ ಸಾತ್ವಿಕ ಗದರುವಿಕೆ ಆ ಕ್ಷಣಕ್ಕೆ ಸಮಾಧಾನ ತಂದಿತು.

ಮರುದಿನ ಬೆಳಗ್ಗೆ 8 ಗಂಟೆಗೆ ಮುಖ್ಯ ಕಾರ್ಯಕ್ರಮವೊಂದಕ್ಕೆ ಸೆಲೆಬ್ರಿಟಿಯನ್ನು ಕರೆದೊಯ್ಯುವಂತೆ ನನ್ನನ್ನು ಕರೆದೊಯ್ಯಲು ಮನೆಯವರಾದಿಯಾಗಿ ನಾಲ್ಕೈದು ಜನ ಸಿದ್ಧರಾಗಿದ್ದರು. ನನ್ನ ಫೈಲನ್ನು ಅಪ್ಪಿಕೊಂಡಿದ್ದ ನರ್ಸ್ ನನ್ನ ಸೆಕ್ರೆಟರಿ ಎಂಬಂತೆ ಭಾಸವಾಯಿತು. 'ಎಂಥಾ ಪ್ಲೆಷರ್ ಇದೂ...' ಎಂದು ಭಾವಿಸಿದೆ. ಇನ್ನೇನು ಹೊರಡಬೇಕು ಎನ್ನುವಾಗ 'ನೈಲ್ ಪಾಲಿಶ್ ರಿಮೂವ್ ಮಾಡಿ' ಎಂದು ಒ.ಟಿ. ಯವರ ಕೋರಿಕೆಗೆ ನರ್ಸ್ ದಡಬಡನೆ ಒರೆಸಿದರು.



ಸರ್ಜರಿ ಮಾಡಿಸಿಕೊಂಡ ಲೇಖಕಿ ಸುಮಾವೀಣಾ

ವೀಲ್ ಚೇರಿನ ಪ್ರಯಾಣ ಲಿಫ್ಟ್‌ನೆಡೆಗೆ ಸಾಗಿತು. ಅಲ್ಲೆಲ್ಲಾ ವಿದೇಶಿಗರೇ ಹೆಚ್ಚು ಓಡಾಡುತ್ತಿದ್ದ ಹಾಗಾಯಿತು. 'ಎಷ್ಟೊಂದು ಜನ, ಯಾರು ನನ್ನವರು' ಎನ್ನುವ ಹಾಡು ಗಂಟಲವರೆಗೆ ಬಂತು. ಬಾಯಿಗೆ ಬರಲಿಲ್ಲ! ಇನ್ನೇನು ಲಿಫ್ಟ್ ಬಟನ್ ಒತ್ತಬೇಕು ಎನ್ನುವಷ್ಟರಲ್ಲಿ 'ಹಣೆಯಲ್ಲಿ ಸ್ಟಿಕರ್ ಇದೆ, ತೆಗೆಯಿರಿ' ಎಂದು ನನ್ನ ಹಣೆಯ ಸ್ಟಿಕರ್ ತೆಗೆದು ಮನೆಯವರ ಕೈಯಲ್ಲಿ ಕೊಟ್ಟಾಗ ದುಃಖ ಉಮ್ಮಳಿಸಿ ಬಂತು. ಬಿಕ್ಕಳಿಸಿ ಅತ್ತೆ. ನರ್ಸ್ ಮೈದಡವಿದರು. ಆಪರೇಷನ್ ಥಿಯೇಟರ್‌ನಲ್ಲಿ ನನ್ನ ನೋವನ್ನು ವೈದ್ಯರು ಅನುಭವಿಸಿದಂತೆ 'ತುಂಬಾ ನೋವಾಗುತ್ತಿದೆಯಾ, ಇರಲಿ. ನಿಮಗೆ ನಿದ್ರೆ ಮಾಡಿಸೋಣ' ಎನ್ನುತ್ತಲೇ ಅನಸ್ತೇಶಿಯಾ ಕೊಟ್ಟಿದ್ದು ತಿಳಿಯಿತು. ಮಕ್ಕಳು ಮನೆಯವರು ಕಣ್ಮುಂದೆ ಬರುತ್ತಿದ್ದರು ಅಷ್ಟೆ. ಮತ್ತೆ ಎಚ್ಚರ ಆದಾಗ ಸಂಜೆ 4.15.

'ನಿಮ್ಮದು ಆಯಿತು, ಎದ್ದೇಳಿ ಎದ್ದೇಳಿ' ಎಂದಾಗ ಎಚ್ಚರವಾಯಿತು. ಟೈಮ್ ಕೇಳಿದೆ. 4.15 ಅಂದರು. ಅಲ್ಲಿಂದ ಐಸಿಯು ವಾರ್ಡಿನೆಡೆಗೆ ಹಾಸಿಗೆಯಲ್ಲಿಯೇ ಚಲಿಸಿದ್ದು ತಿಳಿಯಿತು. ಓಹೋ ತುಂಬಾ ಹೊತ್ತು ಸರ್ಜರಿ ಆಗಿದೆ. ಹೊರಗೆ ಮನೆಯವರು ಹೇಗೆ ಕಾಯ್ದಿದ್ದರು? ಮಕ್ಕಳು ಹೇಗೆ ದುಃಖಿಸಿರಬಹುದು? ನನ್ನ ಕಾರಣದಿಂದ ಇನ್ನಿಲ್ಲದ ದುಃಖ ಎಷ್ಟು ಜನರಿಗೆ ಆಗಿದೆ? ಎಂದು ಯೋಚಿಸುತ್ತಾ ಇದ್ದೆ. ನನಗೆ ಬಿ.ಪಿ. ಕಂಟ್ರೋಲಲ್ಲಿ ಇಲ್ಲ ಎನ್ನುವುದೇ ಅಲ್ಲಿನ ಸಿಬ್ಬಂದಿ ಹಾಗೂ ವೈದ್ಯರ ವರಾತವಾಗಿತ್ತು.

ಅಲ್ಲಿ ಯಲ್ಲವ್ವ ಹೆಸರಿನ ಪೇಶೆಂಟನ್ನು 'ಯಾವ ಪೇಶೆಂಟ್' ಎಂದು ಇತರರು ಕರೆದರೆ ಮಲೆಯಾಳಿ ನರ್ಸ್ 'ಯಾಳವ ಪೇಶೆಂಟ್' ಎನ್ನುತ್ತಿದ್ದಂತೆ ನಕ್ಕಿದ್ದೆ. ಇದನ್ನೇ ಗಮನಿಸುತ್ತಿದ್ದ ನರ್ಸ್ 'ಹೀಗೆ ನಗಿ, ಬಿಪಿ ನಾರ್ಮಲ್' ಆಗುತ್ತದೆ ಎಂದು ತಲೆ ನೇವರಿಸಿದರು. ಎರಡು ಕೈಗಳಿಗೂ ನಳಿಕೆಗಳು, ಎಡಕೈ ಬಲಕೈ ಮಣಿಕಟ್ಟು, ಬಲ ಕುತ್ತಿಗೆಯ ಕೆಳಗೆ ಎಲ್ಲೆಂದರಲ್ಲಿ ಮೈ ತುಂಬೆಲ್ಲಾ ಪೈಪ್‌ಗಳು ಜೋಡಣೆಯಾಗಿದ್ದವು. ಕೈ ಎತ್ತಿದ್ರೆ ಪೈಪುಗಳದ್ದೇ ಭಾರವಾಗುತ್ತಿತ್ತು. ಆಕ್ಸಿಜನ್ ಮಾಸ್ಕ್, ಪಲ್ಸ್ ರೀಡರ್‌ಗಳು ಕಸಿವಿಸಿ ತರಿಸುತ್ತಿದ್ದವು. ಕಾಲಿಗೂ ಲೆಗ್ ಕಂಪ್ರೆಶನ್ ಮೆಶಿನ್‌ಗಳು ಇರಿಸುಮುರಿಸಾಗುತ್ತಿದ್ದವು. ವಾಕರಿಕೆ ಕಾರಣಕ್ಕೆ ಗುಟುಕು ನೀರನ್ನೂ ಕುಡಿದಿರದ ನನ್ನ ತುಟಿಗಳು ಅಕ್ಷರಶಃ ಒಣಗುತ್ತಿದ್ದವು. ನರ್ಸ್ ಶಿಲ್ಪ ನೀರನ್ನು ಕೊಟ್ಟು 'ತುಟಿ ಒದ್ದೆ ಮಾಡಿಕೊಳ್ಳಿ' ಎಂದರೇ ವಿನಃ ಬಾಯಿಗೆ ನೀರು ಕೊಡಲಿಲ್ಲ.

ಮಕ್ಕಳ ಬಗ್ಗೆ ಕೇಳಿದ ಶಿಲ್ಪಗೆ 'ಮಗಳು ಪಿ.ಹೆಚ್.ಡಿ , ಮಗ ಸೆವೆನ್ತ್' ಎಂದಾಗ ಅವರು 'ಅಯ್ಯೋ ಗೊತ್ತೇ ಆಗಲ್ಲ, ಸಂತೂರ್ ಮಮ್ಮಿ ನೀವು' ಎಂದಾಗ ಆನಂದಿಸಿದೆ. ನಿದ್ರೆ ಬರಲು ಸಂಗೀತ, 'ಸುಂದರಕಾಂಡ' ಕೇಳಿಸಿದರಾದರೂ ನಿದ್ರೆ ಬರಲಿಲ್ಲ. ಬಲಗೈ ಗ್ಯಾಸ್ ಲೈಟರನ್ನು ಅದುಮಿದಂತೆ, ಕೈಬೆರಳುಗಳು ಕೀ ಬೋರ್ಡಿನ ಮೇಲೆ ಚಲಿಸುತ್ತಿದಂತೆ ಅನ್ನಿಸುತ್ತಿತ್ತು. ಅರ್ಥಾತ್ ಮಿಸ್ ಮಾಡಿಕೊಳ್ಳುತ್ತಿದ್ದೆ. ಮರುದಿನ ಬೆಳಗ್ಗೆ ಹತ್ತಕ್ಕೆ ನರ್ಸ್ ಕೀರ್ತಿ ಕಟ್ ಫ್ರೂಟ್ಸ್ ತರಿಸಿ ಪ್ರೀತಿಯ ಬಲವಂತದಿಂದ ತಿನ್ನಿಸಿ ನೀರು ಕುಡಿಸಿದರು.

ಅಲ್ಲಿಗೆ ಮೆದುಳಿಗೆ ಸಂಬಂಧಿಸಿದ ಸರ್ಜರಿಗೋಸ್ಕರ ನಾನು ಆಚರಿಸಿದ ನಿರ್ಜಲನೇಮ ಮುಕ್ತಾಯವಾಯಿತು. ನಾನಲ್ಲಿ ಅಂತಃಕರಣಕ್ಕೆ ಪದಗಳಲ್ಲಿ ಹಿಡಿದಿಡಲಾಗದ ಅನುಭವಕ್ಕೆ ಮಾತ್ರ ನಿಲುಕುವ ಅರ್ಥವನ್ನು ಕಂಡುಕೊಂಡೆ. ಆಸ್ಪತ್ರೆಯಲ್ಲಿ ನನ್ನ ನೋವಿಗೆ ಸ್ಪಂದಿಸಿ ಎಲ್ಲರಿಗೂ, ಮುಖ್ಯವಾಗಿ ಅಂಥ ಕ್ಲಿಷ್ಟ ಸರ್ಜರಿಯನ್ನು ಜತನದಿಂದ ಮಾಡಿದ ಡಾಕ್ಟರ್ ರಾಜ್‌ಕುಮಾರ್ ಮತ್ತು ತಂಡಕ್ಕೆ ಆತ್ಮೀಯ ಧನ್ಯವಾದಗಳು.